ಓ.ಎಸ್.309/2022 ಡಿ.ಡಬ್ಲು-1
*ಗುರುಲಿಂಗಯ್ಯ ತಂದೆ ಶಿವಯೋಗಯ್ಯ*

ದಿ.18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎ.ಎ.ಜಿ ವಕೀಲರಿಂದ:-**

ಈ ಕೇಸನ್ನು ಯಾರು-ಯಾರು ಸೇರಿ ಯಾವ ಕಾರಣಕ್ಕೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ವಕೀಲರನ್ನು ನೇಮಿಸಿ ಉತ್ತರ ಹಾಕಿರುತ್ತೇನೆ. 18 ವರ್ಷದ ಹಿಂದೆ ನಮ್ಮ ಹೊಲದಲ್ಲಿ ದಾರಿ ಮಾಡಲು ಪ್ರಯತ್ನಿಸಿದ್ದರಿಂದ ನಾನು ಡಿಕ್ರಿ ಮಾಡಿಸಿಕೊಂಡಿರುತ್ತೇನೆ. ನಾನು ಆ ದಾವೆಯನ್ನು ಯಾರ ವಿರುದ್ದವೂ ಹಾಕಿರಲಿಲ್ಲ. ಫೋಟೊಗಳನ್ನು ನಾನು ನಮ್ಮ ವಕೀಲರು ಮೂಲಕ ಹಾಜುರ ಪಡಿಸಿರುತ್ತೇನೆ. ಸದರಿ ಫೋಟೋಗಳನ್ನು ಹಿಂದಿನ ದಾವೆಯಲ್ಲಿ ಹಾಕಿದ್ದೆ ಎಂದರೆ ಸರಿ. ಸದರಿ ಫೋಟೋಗಳಲ್ಲಿ ಹಳೆಯ ದಾರಿ ಇರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ರೋಡ್ ರೋಲರ್ ಮತ್ತು ಜೆ.ಸಿ.ಬಿ ಇರುವ ಫೋಟೋಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ನಿ.ಪಿ-11 ರಿಂದ 20 ರಲ್ಲಿ ಫೋಟೋಗಳಲ್ಲಿ ಇರುವ ಹೊಲ ನಮ್ಮದಲ್ಲ. ಸದರಿ ಫೋಟೋಗಳಲ್ಲಿ ಕಾಣುವ ದಾರಿ ಯಾವ ಕಡೆ ಹೋಗುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಹೊಲ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ ಎಂದರೆ ಸರಿ. ಸದರಿ ಮುಖ್ಯ ರಸ್ತೆ ಈಚನಾಳ-ನೀರಲಕೇರಿ ರಸ್ತೆ ಎಂದರೆ ಸರಿ. ಸದರಿ ರಸ್ತೆಯ ಪೂರ್ವ ದಿಕ್ಕಿಗೆ ನಮ್ಮ ಹೊಲ ಇರುತ್ತದೆ. ನಮ್ಮ ಹೊಲ ದಾಟಿದ ನಂತರ ಬೇರೆಯವರ ಹೊಲ ಇವೆ ಎಂದರೆ ಅವು ಯಾರವು ಎಂದು ನನಗೆ ಗೊತ್ತಿಲ್ಲ. ನಮ್ಮ ಹೊಲದ ಚೆಕ್ಕುಬಂದಿ ದಕ್ಷಿಣಕ್ಕೆ ನಾಡಗೌಡರ ಹೊಲ. ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಯಾರ ಹೊಲಗಳಿವೆ ಎಂದು ನನಗೆ ಗೊತ್ತಿಲ್ಲ. ಸುಮಾರು 5-6 ವರ್ಷಗಳ ಹಿಂದೆ ನಾನು ನಮ್ಮ ಹೊಲವನ್ನು ಆಂದ್ರದವರಿಗೆ ದಾಳಿಂಬೆ ಬೆಳೆಯಲು ಲೀಜಿಗೆ ಕೊಟ್ಟಿದ್ದೆ ಎಂದರೆ ಸರಿ. ಅವರು ಸುತ್ತ ತಂತಿ ಬೇಲಿ ಹಾಕಿ ಕಂಬಗಳನ್ನು ಹಾಕಿರುತ್ತಾರೆ ಎಂದರೆ ಸರಿ. ಹಣ್ಣಿನ ರಕ್ಷಣೆಗಾಗಿ ಹಸಿರು ಪರದೆಗಳನ್ನು ಹಾಕಿರುತ್ತಾರೆ ಎಂದರೆ ಸರಿ. ಅವರು ಹೊಲದಲ್ಲಿ ನಡುವೆ ದಾರಿ ಬಿಟ್ಟು ಎರಡೂ ಕಡೆ ತಂತಿ ಬೇಲಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆಂದ್ರದವರು ಹೊಲವನ್ನು ಲೀಜ್ ಮಾಡುವುದು ಬಿಟ್ಟಿರುತ್ತಾರೆ ಎಂದರೆ ಸರಿ. ನಾವು ಸದರಿ ಹೊಲದಲ್ಲಿ ತೊಗರಿ ಬೆಳೆ ಹಾಕಿದ್ದೇವೆ ಎಂದರೆ ಸರಿ.

2. 2012 ರಲ್ಲಿ ಪಿಡಬ್ಲೂಡಿ ರವರು ರಸ್ತೆ ಮಾಡುತ್ತಿದ್ದಾರೆ ಎಂದು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮನರೇಗಾ ಯೋಜನೆ ಅಡಿ ರಸ್ತೆ ಮಾಡಲು ಬಂದಿದ್ದರು ಎಂದರೆ ಸರಿಯಲ್ಲ. ಅವರು ರಸ್ತೆ ಮಾಡಲು ಬಂದಾಗ ನಾನು ಓ.ಎಸ್.ನಂ.14/2012 ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಸ್ತೆಯನ್ನು 6 ತಿಂಗಳಲ್ಲಿ ಮುಗಿಸಿ

ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆ ನಂತರ ನಮಗೆ ಅನಧಿಕೃತ ರಸ್ತೆ ಮಾಡಬಾರದು ಎಂದು ಡಿಕ್ರಿ ಪಡೆದಿರುತ್ತೇನೆ ಎಂದರೆ ಸರಿ. ನಂತರ ನಾನು ಜೆ.ಸಿ.ಬಿ ಹಚ್ಚಿ ಸದರಿ ರಸ್ತೆಯನ್ನು ನಮ್ಮ ಹೊಲದವರೆಗೆ ಕಿತ್ತಿದ್ದೆ ಎಂದರೆ ಸರಿಯಲ್ಲ. ಆದ ಕಾರಣ ನಾನು ಸಾರ್ವಜನಿಕ ರಸ್ತೆಯನ್ನು ಹಾಳು ಮಾಡುತ್ತಿದ್ದೇನೆ ಎಂದು ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಪೂರ್ವಜರ ಕಾಲದಿಂದ ರಸ್ತೆ ಇದ್ದರೂ ಸಹ ರಸ್ತೆಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರಸ್ತೆ ಇದ್ದರೆ ನನ್ನ ಹೊಲ ಎರಡು ಬಾಗವಾಗುತ್ತಿದ್ದು ನನ್ನ ಹೊಲವನ್ನು ಒಂದೆ ಬಾಗ ಮಾಡಿಕೊಳ್ಳಲು ರಸ್ತೆ ಇಲ್ಲ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ.

೩. ನಾನು ರಸ್ತೆ ಹಾಳು ಮಾಡಿದ್ದರಿಂದ ಸಾರ್ವಜನಿಕರು ತಹಶಿಲ್ದಾರ ರವರಗೆ ಮನವಿ ಪತ್ರ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ತಹಶೀಲ್ದಾರರು ನನಗೆ ಸ್ಥಳ ಪರಿಶೀಲನೆ ಮಾಡಲು ಬರುತ್ತೇವೆ ಎಂದು ನೋಟಿಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಊರಲ್ಲಿದ್ದರೂ ಸಹ ಕಂದಾಯ ಅಧಿಕಾರಿಗಳು ಅಲ್ಲಿಗೆ ಬಂದಾಗ ಹಾಜರಾಗದೆ ರಸ್ತೆ ಇಲ್ಲ ಎಂದು ಹಠ ಹಿಡಿದಿರುತ್ತೇನೆ ಎಂದರೆ ಸರಿಯಲ್ಲ. ನೂರಾರು ಜನ ಸೇರಿ ಪಂಚನಾಮೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ದಾರಿ ಇದೆ ಎಂದು ತೋರಿಸಲು ಸ್ಥಳ ಪರಿಶೀಲನೆ ಮಾಡಲು ಅರ್ಜಿ ಹಾಕಿದರೆ ನಾನು ತಕರಾರು ಮಾಡುತ್ತೇನೆ. ಅಲ್ಲಿ ಪೂರ್ವಜರ ಕಾಲದಿಂದ ರಸ್ತೆ ಇರುವುದರಿಂದ ನಾನು ತಕರಾರು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.